ವಿಜಯವಾಣಿ ನಂ 1

# ನವೋದ್ಯಮಿ ಮೆಗಾ ಉತ್ಸವ ನಾಳೆಯಿಂದ

## ಸಣ್ಣ ಉದ್ಯಮಿಗಳ ಪ್ರೋತ್ಸಾಹಕ್ಕೆ ದೇಶಪಾಂಡೆ ಫೌಂಡೇಷನ್‌ನಿಂದ ವೇದಿಕೆ

ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ದೇಶಪಾಂಡೆ ಫೌಂಡೇಷನ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಯೋಗದಲ್ಲಿ ಇಲ್ಲಿನ ದೇಶಪಾಂಡೆ ನಗರದ ಸವಾಯಿ ಗಂಧರ್ವ ಹಾಲ್‌ನಲ್ಲಿ ಅ. 18ರಿಂದ 21ರವರೆಗೆ 'ನವೋದ್ಯಮಿ ಮೆಗಾ ಉತ್ಸವ' ಏರ್ಪಡಿಸಲಾಗಿದೆ ಎಂದು ಫೌಂಡೇಷನ್ ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ. 19ರಂದು ಸಂಜೆ 5.30ಗಂಟೆಗೆ ಆಯೋಜಿಸಿರುವ ಉತ್ಸವದ ಉದ್ಘಾಟನೆ ಮತ್ತು ಪ್ರಶಸ್ತಿ ವಿತರಣಾ ಕಾರ್ಯಕ್ರಮಕ್ಕೆ ಸಚಿವ ಜಗದೀಶ ಶೆಟ್ಟರ್ ಚಾಲನೆ ನೀಡುವರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಉಪಸ್ಥಿತರಿರುವರು. ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು ಎಂದರು.

ಅ. 18ರಂದು ಬೆಳಗ್ಗೆ 10 ಗಂಟೆಗೆ ಸಂವಾದ ನಡೆಯಲಿದೆ. ಆಹಾರ ಸಂರಕ್ಷಣೆ ಮತ್ತು ಗುಣಮಟ್ಟ ಇಲಾಖೆ ಅಂಕಿತ ಅಧಿಕಾರಿ ಶಿವಕುಮಾರ ಎಚ್.ಡಿ., ಆಹಾರ ಸುರಕ್ಷತಾ ಅಧಿಕಾರಿ ಸಿ.ಬಿ. ಬೆಂಗೇರಿ, ಧಾರವಾಡ ಕೃಷಿ ವಿವಿಯ ಆಹಾರ ಸಂಸ್ಕರಣೆ ಮತ್ತು ತಂತ್ರಜ್ಞಾನ ವಿಭಾಗದ ಮುಖ್ಯಾಧಿಕಾರಿ ಡಾ. ಹೇಮಲತಾ ಪೋದಾರ, ಶ್ರೀಮಾತಾ ನ್ಯೂಟ್ರಿಫುಡ್ಸ್ ಮಾಲೀಕ ಮಂಜುನಾಥ ಪೂಜಾರ, ನಂದಿ ಖಾರದಪುಡಿ ಮತ್ತು ಮಸಾಲಾ ಪದಾರ್ಥಗಳ ಕಂಪನಿ ಪಾಲುದಾರ ವೀರಭದ್ರಪ್ಪ ಕೊಪ್ಪಳ ಆಗಮಿಸುವರು.

ಅ. 19ರಂದು ಬೆಳಗ್ಗೆ 10.30ಕ್ಕೆ ಜವಳಿ ಉದ್ದಿಮೆಯ ಅರಿವು ಮತ್ತು ಉಡುಪು ವಿನ್ಯಾಸ, ಬಟ್ಟೆ ಚೀಲಗಳ ತಯಾರಿಕೆಯಲ್ಲಿ ನಾವೀನ್ಯತೆ ಕುರಿತ ಸಂವಾದ ನಡೆಯಲಿದ್ದು, ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕ ವೀರೇಶ ಢವಳೆ, ಪ್ರಾಧ್ಯಾಪಕಿಯರಾದ ಸಾಧನಾ ಕಲ್ಲೋಳಿ, ಜ್ಯೋತಿ ವಸ್ತ್ರದ ಪಾಲ್ಗೊಳ್ಳುವರು ಎಂದರು.



ಸಣ್ಣ, ಅತಿ ಸಣ್ಣ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಹಾಗೂ ದೊಡ್ಡ ಪ್ರಮಾಣದ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಸಂಬಂಧ ಈ ಉತ್ಸವ ಏರ್ಪಾಟಾಗಿದೆ. ಕೋಟಿ ರೂ. ಗಿಂತ ಹೆಚ್ಚಿನ ವಹಿವಾಟು ನಿರೀಕ್ಷಿಸಲಾಗಿದೆ.

| ಡಾ. ಗುರುರಾಜ ದೇಶಪಾಂಡೆ

ಅ. 20ರಂದು ಬೆಳಗ್ಗೆ 10.30ಕ್ಕೆ ಮಾರುವವರ ಮತ್ತು ಕೊಳ್ಳುವವರ ಸಭೆ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಪೇಪರ್ ಬ್ಯಾಗ್ ತಯಾರಿಕಾ ತರಬೇತಿ, ಸಂಜೆ 4ಕ್ಕೆ ಹಗ್ಗ-ಜಗ್ಗಾಟ ಸ್ಪರ್ಧೆ ಮತ್ತು ನವೋದ್ಯಮಿ ಸಂತೆ ಆಟ, 5ಕ್ಕೆ ಹಾಸ್ಯ-ಜಾನಪದ ಕಲಾ ಪ್ರದರ್ಶನ, 6ಕ್ಕೆ ದೇಶಪಾಂಡೆ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ನೃತ್ಯ, ಫ್ಯಾಷನ್ ಶೋ ಜರುಗಲಿದೆ.

ಅ. 21ರಂದು ಬೆಳಗ್ಗೆ 10.30ಕ್ಕೆ ಆದಾಯ ತರುವ ಚಟುವಟಿಕೆಗಳ ಕುರಿತ ಮಾಹಿತಿ ಕಾರ್ಯಕ್ರಮ ನಡೆಯಲಿದೆ. ಸಂಜೆ 4ಕ್ಕೆ ಶ್ರವಣಕುಮಾರ, ರೇವತಿ ಅನಿಲಕುಮಾರ ಅವರಿಂದ ಸಂಗೀತ, ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ದೇಶಪಾಂಡೆ ಫೌಂಡೇಷನ್ ಸಿಇಒ ವಿವೇಕ ಪವಾರ ಅಧ್ಯಕ್ಷತೆ ವಹಿಸುವರು ಎಂದರು.

ಫೌಂಡೇಷನ್ ಸಹ ಸಂಸ್ಥಾಪಕಿ ಜಯಶ್ರೀ ದೇಶಪಾಂಡೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕ ಮೋಹನ ಭರಮಕ್ಕನವರ ಇತರರು ಸುದ್ದಿಗೋಷ್ಠಿಯಲ್ಲಿದ್ದರು.